R No.KKNN 12

22 - 11 - 1974

ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

in ★ ★ ★ ★ ★

58 th Year ನೇ ವರ್ಷ

ಸತ್ಯವಾದಿ
SATYAVADI

Golden Jubilee Celebrated Paper
Satyavadi Daily
Mysore 4
– For Influential Publicity

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ 16 ಪುಟ

ಪಂಜಾಬು ಸಚಿವ ಸಂಪುಟ ರಾಜೀನಾಮೆಗೆ ಮನವಿ

ಮಂತ್ರಿಮಂಡಲ ಡಿಸ್‌ಮಿಸ್‌ಗೆ

ಚಂಡಿಘರ್— ಅಕಾಲಿ ದಳದ ನಾಯಕ ಪ್ರಕಾಶಸಿಂಗ್ ಬಾಡಾಲ್ ನಾಯಕತ್ವದಲ್ಲಿ ಪಂಜಾಬು ಜನತಾ ರಂಗದ ಮುಖಂಡರು ಗೌರ್ನರ್ ಶ್ರೀ ಜೌಧುರಿಯವರಿಗೆ ಜ್ಞೈಲ್‌ಸಿಂಗ್ ಮಂತ್ರಿಮಂಡಲವನ್ನು ಡಿಸ್‌ಮಿಸ್ ಮಾಡಬೇಕೆಂದು ಮತದಾರರ 4 ಮಿಲಿಯ ಸಹಿಗಳಿದ್ದ ಮನವಿಪತ್ರವನ್ನು ಅರ್ಪಿಸಿದರು.

ಸಕ್ಕರೆ ರಫ್ತು

ನವದೆಹಲಿ— ಈ ಆರ್ಥಿಕ ವರ್ಷದಲ್ಲಿ ಸಕ್ಕರೆ ರಫ್ತಿನಿಂದ ಭಾರತವು ರೂ 250 ಕೋಟಿ ಸಂಪಾದಿಸುವ ನಿರೀಕ್ಷೆ ಇದೆ ಎಂದು ರಾಜ್ಯಸಭೆಯಲ್ಲಿ ತಿಳಿಸಲಾಯ್ತು.

ಕುದುರೆ ಜೂಜು ನಿಲ್ಲುವುದು

ಮದರಾಸು— 1975 ರ ಮಾರ್ಚಿಯಲ್ಲಿ ತಮಿಳುನಾಡುವಿನಲ್ಲಿ ಕುದುರೆ ಜೂಜು ನಿಲ್ಲಿಸಲಾಗುವುದೆಂದೂ, ಈ ಬಗ್ಗೆ ಕಾಲ ಹೆಚ್ಚಿಸುವುದಿಲ್ಲವೆಂದೂ ಮುಖ್ಯಮಂತ್ರಿ ಶ್ರೀ ಕರುಣಾನಿಧಿಯವರು ಹೇಳಿರುವರು.

ಜೈಲಿನಲ್ಲಿ ಸ್ಥಳವಿಲ್ಲ

ಪಾಟ್ನಾ— ಹಜಾರಿಬಾಗ್‌ನ ಕೇಂದ್ರ ಜೈಲಿನಲ್ಲಿ ಸ್ಥಳವಿಲ್ಲದೆ, ಇಳಿಗೆ ತರಲಾದ ಎಸ್ಪಿಪಿ ನಾಯಕ ಕಾರೂರಿ ಥಾಕೂರಿರನ್ನು ಅಲ್ಲಿ ಇಡಲಾಗದೆ, ಕೋಡಿ ವಿಶ್ರಾಂತಿ ಗೃಹದಲ್ಲಿಡಲಾಯಿತು.

ಮಿಶ್ರರನ್ನು ಸಭೆಯಿಂದ ತೆಗೆದುಹಾಕಲು

ನವದೆಹಲಿ— ಲೋಕಸಭೆಯಿಂದ ರೈಲ್ವೇ ಮಂತ್ರಿ ಶ್ರೀ ಮಿಶ್ರರನ್ನು ತೆಗೆದು ಹಾಕಬೇಕೆಂಬ ಶ್ರೀ ಜ್ಯೋತಿರ್ಮಯಿ ಬಸುರವರ ಸೂಚನೆಯು ಅಡ್ಮಿಟ್ ಆಗಿದು ಸದ್ಯದಲ್ಲೇ ಚರ್ಚೆಗೆ ಬರಲಿದೆ

ಅಮೇರಿಕಾದಲ್ಲಿ ಹಿಂದೂದೇವಾಲಯಗಳು

ಅಮೇರಿಕಾದ ನ್ಯೂಯಾರ್ಕ್ ಮತ್ತು ಪಿಟ್ಸ್‌ಬರ್ಗ್‌ನಲ್ಲಿ ಮುಂದಿನ ವರ್ಷ ಸೆಪ್ಟಂಬರ್ ಹೊತ್ತಿಗೆ ಪುರಾತನ ದಕ್ಷಿಣ ಭಾರತದ ವಾಸ್ತುಶಿಲ್ಪಿಯ ಎರಡು ದೇವಾಲಯಗಳು ಸಿದ್ಧವಾಗುವುವು ; ನ್ಯೂಯಾರ್ಕಿನಲ್ಲಿರುವ 30000 ಹಿಂದೂಗಳಿಗೂ, ಪಿಟ್ಸ್‌ಬರ್ಗಿನಲ್ಲಿರುವ ಅಷ್ಟೇ ಹಿಂದೂಗಳಿಗಳಿಗೂ ಬಹುಕಾಲದಿಂದಿದ್ದ ಆಸೆಯು ನೆರವೇರಿದಂತಾಗುವುದು ; ನ್ಯೂಯಾರ್ಕಿನಲ್ಲಿ ಶ್ರೀ ಗಣೇಶ ದೇವಾಲಯ, ಪಿಟ್ಸ್‌ಬರ್ಗಿನಲ್ಲಿ ಶ್ರೀ ವೆಂಕಟೇಶ್ವರ ದೇವಾಲಯ ; ಇವುಗಳ ನಿರ್ಮಾಣಕ್ಕೆ ರೂ. 25 ಲಕ್ಷ ದಿಂದ 30 ಲಕ್ಷ ಖರ್ಚಾಗುವುದು.

ಸಾದರ ಸ್ವೀಕಾರ

ಬೆಳಗಾಂನ ಖ್ಯಾತ ದ್ವೈವಾರಪತ್ರಿಕೆ "ಸಂದೇಶ"ವ ದೀಪಾವಳಿ ಸಂಚಿಕೆಯನ್ನು ಸಾದರದಿಂದ ಸ್ವೀಕರಿಸಿದ್ದೇವೆ ಕಥೆ, ಕವನ, ಪ್ರಬಂಧಗಳನ್ನೂ, ವರ್ತಮಾನ ಭವಿಷ್ಯವನ್ನೂ ಒಳಗೊಂಡಿರುವ ಈ ಸಂಚಿಕೆಯು ಓದುಗರಿಗೆ ಉಪಯುಕ್ತವೂ ಆನಂದದಾಯಕವೂ ಆಗಿದೆ

ಧಾಳಿಗಳಿಂದ ಶೇಖರಿಸಿದ ಆಹಾರಧಾನ್ಯ

ನವದೆಹಲಿ– ರಾಜ್ಯ ಸರಕಾರಗಳು ಈ ವರ್ಷ ಜನವರಿಯಿಂದ ನಡೆಸಿದ ಧಾಳಿಗಳಲ್ಲಿ 98000 ಟನ್ ಆಹಾರಧಾನ್ಯವು ಅಕ್ರಮ ದಾಸ್ತಾನುಗಾರರಿಂದ ಹೊರಬಂದಿತೆಂದು ರಾಜ್ಯ ಸಭೆಯಲ್ಲಿ ತಿಳಿಸಲಾಯಿತು – ಈ ಸಂಬಂಧವಾಗಿ 5392 ಮಂದಿ ಬಂಧಿಸಲ್ಪಟ್ಟರೆಂದೂ ತಿಳಿಸಲಾಯಿತು – ನವೆಂಬರ್ 18 ರವರೆಗೆ 1860000 ಟನ್ ಗೋಧಿ ಶೇಖರಿಸಲಾಗಿದೆಯೆಂದೂ ತಿಳಿಸಲಾಯಿತು

★

ಕಂದಾಯ ಮಂತ್ರಿಗಳ ಅನಿರೀಕ್ಷಿತ ಭೇಟಿ

ಬೆಂಗಳೂರು— ಕಂದಾಯ ಮಂತ್ರಿ ಶ್ರೀ ಹುಚ್ಚಮಾಸ್ತಿಗೌಡರು ಹಲವು ತಾಲ್ಲೂಕುಗಳಿಗೆ ಅನಿರೀಕ್ಷಿತ ಭೇಟಿ ಕೊಟ್ಟಾಗ, ತಾಲ್ಲೂಕು ಮತ್ತು ಸಬ್‌ರಿಜಿಸ್ಟ್ರಾರ್‌ರ ಕಚೇರಿಗಳಲ್ಲಿ ಭಾರಿ ಮೋಸ ಮತ್ತು ಭ್ರಷ್ಟಾಚಾರವನ್ನು ಕಂಡುಹಿಡಿದರು.

●

ಪ್ರಧಾನಿಯವರ ಔದಾರ್ಯ

ನವದೆಹಲಿ— ಪ್ರಧಾನಿ ಇಂದಿರಾರವರು ತಮ್ಮನ್ನು ಕಾಣಲು ಬಂದ ಕುರುಡ ಮಕ್ಕಳ ತಂಡಕ್ಕೆ ಬ್ಲಾಂಕೆಟ್‌ಗಳನ್ನು ಬಹುಮಾನಿಸಿದರು.

★

ಸೇತುವೆ ಉದ್ಘಾಟನೆ

ರಾಜಮಹೇಂದ್ರಿ– ಪವಿತ್ರ ಗೋದಾವರಿ ನದಿಯ ಮೇಲೆ ಕಟ್ಟಿರುವ ರೂ 12.22 ಕೋಟಿ ಖರ್ಚಿನ ರೈಲ್ವೇ ಹಾಗೂ ರಸ್ತೇ ಸೇತುವೆಯನ್ನು ಭಾರತಾಧ್ಯಕ್ಷ ಶ್ರೀ ಅಹಮದ್‌ರವರು ಉದ್ಘಾಟಿಸಿದರು – ಈ ಸಂದರ್ಭದಲ್ಲಿ, 74-75 ರಲ್ಲಿ ಆಹಾರಧಾನ್ಯ ಸಾಗಾಣಿಕೆಯಲ್ಲಿ ರೈಲ್ವೆಗಳಿಗೆ ರೂ 50 ಕೋಟಿ ನಷ್ಟವಾಗಿತೆಯೆಂದು ರೈಲ್ವೇ ಮಂತ್ರಿ ಶ್ರೀ ಮಿಶ್ರರು ತಿಳಿದರು – ಇದು ಏಷ್ಯಾದಲ್ಲೇ ಅತಿ ದೊಡ್ಡ ರೈಲ್ವೇ ಸೇತುವೆ.

ಅಧ್ಯಕ್ಷರ ಉಪಾಧ್ಯಕ್ಷರ ಆಸ್ತಿ ಘೋಷಣೆ

ನವದೆಹಲಿ— ಭಾರತ ಅಧ್ಯಕ್ಷತೆಯ ಉಪಾಧ್ಯಕ್ಷತೆಯ ಉಮೇದುವಾರರ ತಮ್ಮ ಆಸ್ತಿ ಘೋಷಿಸಬೇಕೆಂಬ ಕಾಂಗ್ರೆಸ್ ಎಂ. ಪಿ. ಶ್ರೀ ಮಿಶ್ರರ ಕೇಳಿಕೆಯು ಭಾರತ ಸರಕಾರಕ್ಕೆ ಆಶ್ಚರ್ಯ ಉಂಟಾಗಿದೆ – ಅಧಿಕಾರಿಗಳೂ ಮತ್ತು ಪಾರ್ಟಿಯ ಮೇಲ್ಪಟ್ಟವರು ಈ ತೊಡಕಿದಲ್ಲಿ ಸಿಕ್ಕಿ ಬೀಳಲಿರಬೇಕೆಂದು ಕಳ್ಳಸಾಗಾಣಿಕೆಗಾರರು ಕೋರ್ಟ್‌ಗೆ ಹೋಗುವುದನ್ನು ಪ್ರತಿಬಂಧಿಸಲು ಅಧ್ಯಕ್ಷರ ಸುಗ್ರೀವಾಜ್ಞೆ ಎಂದಿರುವರು – ಬಂಧಿಸಲ್ಪಡುವ ಪ್ರತಿ ಕಳ್ಳಸಾಗಾಣಿಕೆಗಾರನ ತೊಡಕಿನಲ್ಲಿ ನೂರು ಮಂದಿ ಅಧಿಕಾರಿಗಳೂ, ಪಾರ್ಟಿಯಲ್ಲಿ ಮೇಲ್ಪಟ್ಟವರೂ ಸಿಕ್ಕಿಬೀಳುವರೆಂದಿರುವರು.

★

ಜೈಪ್ರಕಾಶರ ಗೌರವಾರ್ಥ ಟೀ ಪಾರ್ಟಿ

ನವದೆಹಲಿ— ಇಲ್ಲಿ 8 ದಿನ ಇರಲು ಬಂದ ಜಯಪ್ರಕಾಶನಾರಾಯಣರ ಗೌರವಾರ್ಥ ಯಂಗ್ ಟರ್ಕ್ ಶ್ರೀ ಚಂದ್ರಶೇಖರರು ಏರ್ಪಡಿಸಿದ್ದ ಟೀ ಪಾರ್ಟಿಗೆ ಬಂದಿದ್ದ 60 ಕಾಂಗ್ರೆಸ್ ಪಾರ್ಲಿಮೆಂಟು ಸದಸ್ಯರೂ ಮುತ್ತಿತರರಿಗೂ, ಬೀಹಾರಿನಲ್ಲಿ ಗಫೂರ್ ಮಂತ್ರಿಮಂಡಲದ ರಾಜೀನಾಮೆಗಾಗಿ, ಶಾಸನ ಸಭಾ ವಿಸರ್ಜನೆಗಾಗಿ ತಾವು ನಡೆಸುತ್ತಿರುವ ಚಳುವಳಿ ಬಗ್ಗೆ ತಿಳಿಸಿದರು – ಶಾಸನ ಸಭೆಯನ್ನು ಸ್ವಲ್ಪ ಕಾಲ ಸಸ್ಪೆಂಡ್ ಮಾಡುವದನ್ನು ತಾವು ಒಪ್ಪುವುದಿಲ್ಲವೆಂದು ಜಯಪ್ರಕಾಶರು ಹೇಳಿದರು.

❋

ಅವಶ್ಯಪದಾರ್ಥಗಳಿಗೂ ಲೆವಿ

ನವದೆಹಲಿ— ಅವಶ್ಯಪದಾರ್ಥಗಳ ಉತ್ಪಾದಿಸುವವರ ಮೇಲೆ ಆ ಪದಾರ್ಥಗಳ ಬಗ್ಗೆ ಲೆವಿ ವಿಧಿಸುವ ವಿಷಯವು ಸರಕಾರದ ಪರ್ಯಾಲೋಚನೆಯಲ್ಲಿದೆಯೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

✱

(2)

ರಾ ವಣಾ ಯ ಣ

ಇತ್ತೀಚೆಗೆ ಮಾಸ್ಕೋದ ಮೈತ್ರಿ ಭವನದ ಗ್ರ್ಯಾಂಡ್ ಹಾಲ್‌ನಲ್ಲಿ ತುಳಸೀ ಾಸರ ರಾಮಚರಿತ ಮಾನಸದ 400 ನೇ ವಾರ್ಷಿಕೋತ್ಸವವನ್ನು ಆಚರಿಸಲಾಯಿ ು ; ರಾಮಚರಿತ ಮಾನಸ ರಾಮಾಯಣವೆಂದೇ ಜನಪ್ರಿಯವಾಗಿದೆ – ಉಪ್ಪಾಟ ಿ ಭಾಷಣ ಮಾಡುತ್ತಾ ಚೆಲ್ಯಿಷೆವ್‌ರವರು- ಶತಮಾನಗಳು ಉರುಳಿವೆ ; ಆ ದರೆ ಾಮಾಯಣ ಹೆಚ್ಚು ಹೆಚ್ಚು ವ್ಯಾಪಕವಾಗಿ ಜನರ ಹೃದಯಗಳಲ್ಲಿ ಸ್ಥಾನ ಪಡೆಯು ದೆ ; ವಿಶ್ವ ಸಾಹಿತ್ಯದಲ್ಲಿ ಅಪರೂಪ ಸ್ಥಾನ ಗಳಿಸಿದೆ ಎಂದರು ; ರಾಮಾಯಣದ ತಿಹಾಸ ಮಹತ್ವವನ್ನು ಕಡೆಗಣಿಸುವಂತಿಲ್ಲ ; ಜವಹರಲಾಲ್ ನೆಹ್ರೂರವರು, ಾರತದ ಎರಡು ಪ್ರಾಚೀನ ಮಹಾಕಾವ್ಯಗಳಾದ ರಾಮಾಯಣ ಮತ್ತು ಮಹಾ ಾರತಗಳು ವ್ಯಾಯುಶಃ ಹಲವು ಸೂರು ವರ್ಷಗಳಲ್ಲಿ ರಚಿತವಾಗಿರಬಹುದು....ಆದರೆ ಶಕ್ತನಕಾನಗಳ ತನಕ ಜನತೆಯ ವಿಚಾರಗಳ ಮೇಲೆ ಈ ಕೃತಿಗಳಂತೆ ಗಾಢ ಪ್ರ ಾವ ಬೀರಿದ ಕೃತಿಗಳನ್ನು ಬೇರಾವ ದೇಶದಲ್ಲೂ ಕಾಣೆ....ಕಾಲವು ಈ ಕೃತಿಗಳಿಗೆ ುಪ್ಪ ಒದಗಿಸಿಲ್ಲ, ಇಲ್ಲವೇ ಸಂಪ್ರದಾಯಗಳಿಂದ ಈ ಕೃತಿಗಳು ಮೌಲ್ಯ ಕಳೆದು ಂಡಿಲ್ಲ—ಇಂದಿಗೂ ಇವು ಭಾರತೀಯ ಜನಜೀವನದ ಜೀವಂತ ಶಕ್ತಿಯಾಗಿದೆ ಂದಿದ್ದರು.

ಪ್ರಾಜೆಕ್ಟ್ ಟೈಗರ್, ಡೆಪ್ಯೂಟಿ ಡೈರೆಕ್ಟರ್‌ರವರ ಕಚೇರಿ,
ಲಕ್ಷ್ಮೀವಿಲಾಸ ರಸ್ತೆ, ಮೈಸೂರು – 1

ಪ್ರ ಕ ಟ ಣೆ

ದಿನಾಂಕ : 8 ನೇ ನವೆಂಬರ್, 1974 ನಂ. ಡಿಪಿ. ಇಎಂಟಿ/74-75

ಈ ಕೆಳಗೆ ಕಾಣಿಸಿರುವ ಷೆಡ್ಯೂಲಿನಲ್ಲಿ ಸೂಚಿಸಿರುವ ಕೆಲಸಗಳಿಗಾಗಿ ರಿಜಿ ರ್ ಆದ ಕಂಟ್ರಾಕ್ಟರ್‌ಗಳಿಂದ ಕೆಲಸದ ಹೆಸರು ಬರೆದ ಟೆಂಡರ್ ದಾರರಿಂದ ಸೂಕ್ತ ತಿಯಲ್ಲಿ ಸಹಿ ಮಾಡಲಾದ ಮೊಹರಾದ ಟೆಂಡರ್‌ಗಳನ್ನು ಮೈಸೂರಿನಲ್ಲಿರುವ, ್ರಾಜೆಕ್ಟ್ ಟೈಗರ್, ಡೆಪ್ಯೂಟಿ ಡೈರೆಕ್ಟರ್‌ರವರು 28-11-74 ರ ಮಧ್ಯಾಹ್ನ 4 ಂಟೆ ವರೆಗೆ ಸ್ವೀಕರಿಸುವರು ಸ್ವೀಕರಿಸಲಾದ ಟೆಂಡರುಗಳನ್ನು ಸಂದರ್ಭಾನು ಾರ ಟೆಂಡರ್‌ದಾರರ ಅಥವಾ ಅವರ ಅಧಿಕೃತ ಪ್ರತಿನಿಧಿಗಳ ಸಮ್ಮುಖದಲ್ಲಿ ಒಡೆಯು ಾಗುವುದು.

ಷೆ ಡ್ಯೂ ಲ್

ಕೆಲಸದ ಹೆಸರು	ಸುಮಾರು ಅಂದಾಜು ಹಣ ರೂ	ಇ ಎಂ ಡಿ ರೂ	ಕಾಲ ಮಿತಿ
ಬೇಗೂರ್‌ನಲ್ಲಿ ಫಾರೆಸ್ಟ್ ಗಾರ್ಡ್‌ಗಳಿಗೆ ಜೋಡಿ ಕ್ವಾರ್ಟರ್ಸ್ ನಿರ್ಮಿಸುವುದು	24650	1250	31-3-75
ಬಾನೂರ್‌ಗಡ್ಡದಲ್ಲಿ ಫಾರೆಸ್ಟ್ ಗಾರ್ಡ್‌ಗಳಿಗೆ ಜೋಡಿ ಕ್ವಾರ್ಟರ್ಸ್ ನಿರ್ಮಿಸುವುದು	24650	1250	31-3-75

ಚನೆ :— 1 ಪ್ರತಿ ಕೆಲಸದ ಮುಂದೆ ಸೂಚಿಸಿರುವ ಅರ್ನೆಸ್ಟ್ ಹಣ ಠೇವಣಿಯನ್ನು ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್ ಇದಕ್ಕೆ ಪಾವತಿ ಮಾಡಬೇಕ್ಕು ಮತ್ತು ಡೂಪ್ಲಿಕೇಟ್ ಚಲನ್‌ನನ್ನು ಟೆಂಡರ್‌ಗೆ ಜೋಡಿಸಬೇಕು

2 ಟೆಂಡರ್ ಫಾರಂನ್ನು ಈ ಕಚೇರಿಯಲ್ಲಿ ಕೆಲಸದ ಎಲ್ಲ ದಿನಗಳಲ್ಲಿ ಕಚೇರಿ ಕೆಲಸದ ವೇಳೆಗಳಲ್ಲಿ 27 ನೇ ನವೆಂಬರ್ 1974 ರ ಸಂಜೆ 5-30 ಗಂಟೆ ವರೆಗೆ, ರೂ 5/- ಪ್ಲಸ್ ಮಾರಾಟ ತೆರಿಗೆ ಪ್ರತಿ ಯೊಂದಕ್ಕೆ ಪಾವತಿ ಮಾಡಿದಲ್ಲಿ ಕೊಡಲಾಗುವುದು.

3 ಕೆಲಸದ ಎಲ್ಲ ದಿನಗಳಲ್ಲಿ ಮೈಸೂರಿನಲ್ಲಿರುವ, ಪ್ರಾಜೆಕ್ಟ್ ಟೈಗರ್, ಡೆಪ್ಯೂಟಿ ಡೈರೆಕ್ಟರ್‌ರವರು ಇವರೊಡನೆ ಯಾವುದೇ ವಿವರ ಗಳಿಗಾಗಿ ದೂರವಿಚ್ಚಿ ವ್ಯವಹರಿಸಬಹುದು

ಸಹಿ/- ಕೆ. ಟಿ ಗಣಪತಿ,
ಡೆಪ್ಯೂಟಿ ಡೈರೆಕ್ಟರ್

ವುಡ್‌ಲಾಂಡ್ 22 11 74 ರಿಂದ

ಅಮೋಘ 3 ನೇ ವಾರ

ರಾಜೇಶ್ ಖನ್ನ, ಜೀನತ್ ಅಮಾನ್,
ಪ್ರೇಂ ಚೋಪ್ರ, ಯೋಗಿತಾ ಬಾಲಿ ಅಭಿನಯಿಸಿರುವ
ಅಪೂರ್ವ ಈಸ್ಟ್‌ಮನ್ ಕಲರ್ ಹಿಂದಿ ಕಲಾಕೃತಿ

ಅ ಜ ನಾ ಬಿ

ಸಂಗೀತ – ಆರ್. ಡಿ. ಬರ್ಮನ್ ನಿರ್ದೇಶನ – ಶಕ್ತಿ ಸಾಮಂತ್

ದಿನ 4 ಪ್ರದರ್ಶನಗಳು

ಅ ಪೆ ರಾ 22 11 74 ರಿಂದ

ಆನೋಕ ದಾನ್

ಅನಿಲ್ ಧವನ್ — ಅರ್ಜುನ ಇವರ ಅಭಿನಯದಿಂದ ಕೂಡಿದ
ಅಮೋಘ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ

ಸಂಗೀತ – ಸಲೀಲ್ ಚೌಧುರಿ

ದಿನ 3 ಪ್ರದರ್ಶನಗಳು

SHAKTI
SUDHA

A Superb Tonic

Contribute Liberally
to the National Defence Fund

Edited Printed and Published by Dharmapracharanurata M S. Krishna Rao (Proprietor) at the Satyavadi Press, Chamarajapuram Mysore